# ಅಜ್ಜಿ ಮನೆಯಲ್ಲಿ ಪೂರ್ಣಿಮಾ

ಪೂರ್ಣಿಮಾ ನಾಗಶ್ರೀಯ ತೌರೂರಿಗೆ ರವಾನೆಯಾದಳು. ಗಂಡ, ಹೆಂಡತಿ ಜೊತೆಯಲ್ಲಿ ಹೋಗಿ ಅವಳನ್ನು ಆ ಅಜ್ಜನ ಮನೆಯಲ್ಲಿ ಬಿಟ್ಟು ಬಂದರು. ಸೊಸೆ ಹೀಗೆ ತನ್ನ ಹಟ ಸಾಧಿಸಿಕೊಳ್ಳಬಲ್ಲಳು ಎಂಬುದನ್ನು ಕಣ್ಣಾರೆ ಕಂಡ ರಾಧಮ್ಮನಿಗೆ ಇದನ್ನು ಅರಗಿಸಿಕೊಳ್ಳಲಾಗದೆ ದಿಗ್ಭ್ರಾಂತಿ. 'ಮನೆಯಲ್ಲಿ ದೊಡ್ಡವರು ಅನಿಸಿಕೊಂಡವರ ಮಾತಿಗೆ ನಯಾಪೈಸೆ ಬೆಲೆ ಇಲ್ಲವಾ? ಹಿರಿಯರು ಅಂತ ಮನೆಯಲ್ಲಿ ಮತ್ತ್ಯಾತಕ್ಕಿರುವುದು? ಇವರು ಮಾಡಿದ್ದನ್ನೆಲ್ಲಾ ನೋಡುತ್ತಾ ಬಾಯಲ್ಲಿ ಕಡುಬು ತುಂಬಿಕೊಂಡಿರುವುದಕ್ಕಾ? ಏನೆಂದುಕೊಂಡಿದ್ದಾಳೆ ನನ್ನನ್ನು? ಇವಳು ತುದಿಬೆರಳ ಸನ್ನೆಯಲ್ಲಿ ಆಡಿಸುತ್ತಿರುವ ಈ ಇವಳ ಗಂಡ ಇಷ್ಟು ವರ್ಷ ಗಾಳಿ ಕುಡಿದುಕೊಂಡು ಬದುಕಿದ್ದಾ? ಚೋಟುದ್ದ ಇದ್ದವನನ್ನು ಆಳುದ್ದ ಮಾಡುವುದಕ್ಕೆ ರಕ್ತ, ನೀರು ಒಂದು ಮಾಡಿಕೊಂಡು ಗೆಯ್ದಿದ್ದು ಇವಳಿಗೇನು ಗೊತ್ತಿದೆ? ನಿನ್ನೆ ಮೊನ್ನೆ ಬಂದವಳು ಈ ಮನೆಗಾಗಿ ಜೀವ ತೇಯ್ದವಳನ್ನು ಮೂಲೆಯಲ್ಲಿ ಕೂರಿಸುವುದು ಅಂದರೆ? ದುಡ್ಡಿದ್ದರೆ ಅವಳ ಅಪ್ಪನ ಮನೆಯಲ್ಲಿ. ತಾನೇನು ಅವರ ಮನೆಯ ಅನ್ನ ತಿನ್ನಲು ಹೋಗಿ ಕೂರುತ್ತೀನಾ? ನಾಳೆ ಇವಳಿಗೆ ಅಪ್ಪನ ಆಸ್ತಿ ಸಿಕ್ಕಿದರೆ ನನಗೇನು ಕಿರೀಟ ಬಂದ ಹಾಗಾಯ್ತು?'

